ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿನ ಅತೀವೃಷ್ಟಿಯಿಂದ ಹಾನಿಯಾದ ಕೆರೆಗಳ ದುರಸ್ತಿ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 334(562)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಅತೀವೃಷ್ಟಿ ಶೀರ್ಷಿಕೆಯಲ್ಲಿ ತೆಗೆದುಕೊಂಡಿರುವ ದುಗನೂರು,ಕೊಲಕುಂದ, ಲೊತಕುಂಟಿ ಲಿಂಗಂಪಲ್ಲಿ, ಇತ್ಯಾದಿ ಕೆರೆಗಳಿಗೆ ಖರ್ಚಾಗಿರುವ ಹಣ ಎಷ್ಟು?

ಆ) ಇವುಗಳ ಕೆಲಸ ಪೂರ್ತಿಯಾಗಿ ರೈತರಿಗೆ ನೀರು ಸರಬರಾಜು ಮಾಡಲಾಗುತ್ತಿದೆಯೇ?

ಇ) ನೀರು ಸರಬರಾಜಾದರೆ ಯಾವ ಯಾವ ಕೆರೆಯ ಕೆಳಗೆ ಎಷ್ಟು ಎಷ್ಟು ಎಕರೆ ನೀರಾವರಿಯಿಂದ ಅನುಕೂಲವಾಗುತ್ತದೆ

ಈ) ಒಂದು ವೇಳೆ ಪೂರ್ತಿಯಾಗಿಲ್ಲವೆಂದರೆ ಇವುಗಳನ್ನು ಪೂರ್ತಿ ಮಾಡಿ ನೀರಾವರಿ ಅನೂಕೂಲ ಮಾಡುವುದು ಯಾವಾಗ?

ಶ್ರೀ ಧರ್ಮ ಸಿಂಗ್ : (ಕಂದಾಯ ಸಚಿವರು)

ಅ) ಈ ಕಾಮಗಾರಿಗಳಿಗೆ ಇಲ್ಲಿಯವರೆಗ ರೂ.9.593 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಅತಿವೃಷ್ಟಿ ಶೀರ್ಷಿಕೆಯಲ್ಲಿ ಸೇಡಂ ಕ್ಷೇತ್ರದಲ್ಲಿ ಕೈಗೊಂಡಿದ್ದ ಕೆರೆಗಳ ಪೈಕಿ 10 ಕೆರೆಗಳ ದುರಸ್ತಿ ಕಾಮಗಾರಿ ಪೂರ್ತಿಗೊಂಡಿರುತ್ತದೆ. ಮಳೆಬಾರದ ಕಾರಣ ಕೆರೆಗಳು ತುಂಬಿರುವುದಿಲ್ಲ. ಕೆರೆಯಲ್ಲಿನ ನೀರಿನ ಮಟ್ಟದ ಅನುಗುಣವಾಗಿ ನೀರು ಸರಬರಾಜು ಮಾಡಲಾಗುವುಗು.

ಈ ಕೆಳಕಂಡ ಕೆರೆಗಳ ಅಂಗಳದಲ್ಲಿ ಪೂರ್ಣ ಮಟ್ಟದ ನೀರು ತುಂಬಿದಾಗ ಈ ಕೆಳಕಂಡ ವಿಸ್ತೀರ್ಣದ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಅನುಕೂಲವಾಗುತ್ತದೆ.

(ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

(1) ನರಸಪ್ಪ ಟ್ಯಾಂಕ್ ಬಂದೆಪಲ್ಲಿ - 34.21

(2) ಧೋರತಲಾಬ - 40.48

(3) ರಾಮಚೇರು - 44.73

(4) ಜತ್ತಿ ಕತವಾ ಮುಧೋಳ - 15.75

(5) ಸಲ್ಲಾ ಕುಂಟಾ ಈಗ್ನಿಪಲ್ಲಿ - 22.26

(6) ಫರೀದಾ ಸಾಗರ ಈರ್ಮಾಪಲ್ಲಿ - 26.31

(7) ತುಮ್ಮಲಮ್ಮನ ಕುಂಟಾ ದುಗನೂರು - 9.31